ಕುಮುದ್ವತಿ ನದಿಯ ಸೇತುವೆಗೆ ತೆರಿಗೆ ಸಂಗ್ರಹ

೩೮೬ (೧೫೫೫) ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ/ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ರೀತಿ ವಸೂಲು ಮಾಡಲು ಅನುಮತಿ ನೀಡಲಾಗಿದೆಯೇ?

ಇ) ಖಾಸಗಿ ವಾಹನ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿಯಾದ ವಸೂಲಿಯಿಂದ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು/ತಪ್ಪಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ನೀಡಲಾಗಿದೆ.

ಇ) ಇಲ್ಲ.

ಈ) ರಾಷ್ಟ್ರೀಯ ಹೆದ್ದಾರಿ ಕಾಯಿದೆ ಪ್ರಕಾರ ಭಾರತ ಸರ್ಕಾರದ ಪತ್ರ ಸಂಖ್ಯೆ ಪಿಎಲ್-೨೩(೧):೭೭ ದಿನಾಂಕ ೧೬-೧೨-೧೯೭೮ರಲ್ಲಿನ ಸೂಚನೆಗಳಂತೆ ಈ ಸೇತುವೆ ನಿರ್ಮಾಣ ವೆಚ್ಚ, ಬಡ್ಡಿ, ನಿರ್ವಹಣಾ ವೆಚ್ಚ ಇವೆಲ್ಲ ಮೊತ್ತವೂ ವಸೂಲಿಯಾದ ತಕ್ಷಣ ಕರವಸೂಲಿಯನ್ನು ನಿಲ್ಲಿಸಲಾಗುವುದು.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇರತಕ್ಕದ್ದು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. ''ಆ ರೀತಿ ವಸೂಲಿ ಮಾಡಲು ಅನುಮತಿ ನೀಡಲಾಗಿದೆಯೆ?'' ಎಂದು ಕೇಳಿದ್ದಕ್ಕೆ ಅನುಮತಿಯನ್ನು ನೀಡಲಾಗಿದೆಯೆಂದು ಹೇಳಿದ್ದಾರೆ. ಮೂರನೆಯ ಪ್ರಶ್ನೆ ''ಖಾಸಗಿ ವಾಹನದ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?'' ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ. ನನ್ನ ಕಡೆಯ ಪ್ರಶ್ನೆ ಸ್ವಲ್ಪ ತಿದ್ದುಪಡಿಯಾದಂತೆ ಕಾಣುತ್ತಿದೆ. ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ತರಹ ಮೂರು ಕಡೆ ಸೇತುವೆಗಳನ್ನು ಕಟ್ಟಲಾಗಿತ್ತು. ಹಾಸನದ ಹತ್ತಿರ ಮತ್ತು ನಂಜನಗೂಡು ಹತ್ತಿರ ಕಟ್ಟಲಾಗಿತ್ತು. ಅಲ್ಲಿ ಸುಂಕವನ್ನು ವಸೂಲಿ ಮಾಡಿ ನಿಲ್ಲಿಸಿದ್ದಾರೆ. ಒಂದು ವಾಹನಕ್ಕೆ ೮ ರೂಪಾಯಿಗಳಂತೆ ತೆಗೆದು ಕೊಳ್ಳುತ್ತಾರೆ. ವಾಹನಗಳ ಮಾಲೀಕರು ಪ್ರಯಾಣಿಕರಿಂದ

ತಲಾ ೨೫ ಪೈಸೆ ವಸೂಲಿ ಮಾಡುತ್ತಿದ್ದಾರೆ. ಬಸ್ಸಿನೊಳಗೆ ೧೫೦ ಜನ ಪ್ಯಾಸೆಂಜರ್ಸ್ ಇದ್ದರೆ ಇವರು ಕೊಡುವುದು ೬ರಿಂದ ೮ ರೂಪಾಯಿಗಳು. ಒಬ್ಬ ಪ್ರಯಾಣಿಕರಿಂದ ೨೫ ಪೈಸೆಗಳಂತೆ ಇದುವರೆಗೂ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಪ್ರಯಾಣಿಕರಿಂದ ವಸೂಲಿ ಮಾಡುವುದನ್ನು ನಿಲ್ಲಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ:- ಮಾನ್ಯ ಅಧ್ಯಕ್ಷರೆ, ೧೯೯೦-೯೧ನೇ ಸಾಲಿನಲ್ಲಿ ಈ ರೀತಿ ೨೬ ಲಕ್ಷ ರೂ.ಗಳನ್ನು ವಸೂಲಿ ಮಾಡಿದ್ದಾರೆ. ಅದಕ್ಕೆ ೪೪ ಲಕ್ಷ ರೂಪಾಯಿಗಳ ಖರ್ಚು ಬಂದಿದೆ. ಈಗ ಟೆಂಡರ್ ಕಾಲ್‌ಫಾರ್ ಮಾಡಿದ್ದೇವೆ. ಹರಾಜಿನಲ್ಲಿ ಯಾರು ಜಾಸ್ತಿ ಬಿಡ್ ಮಾಡುತ್ತಾರೋ ಅಂತಹವರಿಗೆ ಬಿಡ್ ನಿಲ್ಲಿಸಿ ನಮ್ಮ ಹಣ ಬರುವವರೆಗೆ ವಸೂಲಿ ಮಾಡುತ್ತೇವೆ. ಮಾನ್ಯ ಸದಸ್ಯರು ಪ್ರಯಾಣಿಕರಿಂದ ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ಆ ತರಹ ಏನಾದರೂ ಆಗಿದ್ದರೆ ಅದನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಆಂಜನಮೂರ್ತಿ:- ಮಾನ್ಯ ಮಂತ್ರಿಗಳು ಪ್ರಯಾಣಿಕರಿಂದ ವಸೂಲಿ ಮಾಡುತ್ತಿರುವುದು ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದಾರೆ. ನಾನು ಅವರಲ್ಲಿ ಕ್ಷಮೆ ಕೇಳುತ್ತೇನೆ. ಪ್ರಯಾಣಿಕರಿಂದ ನಿಜವಾಗಿಯೂ ವಸೂಲಿ ಮಾಡುತ್ತಿದ್ದಾರೆ. ಆದರೆ ಈ ೨೫ ಪೈಸೆ ಪ್ರಯಾಣಿಕರಿಂದ ವಸೂಲು ಮಾಡುವುದಕ್ಕೆ ರಸೀತಿ ಕೂಡ ಕೊಡುತ್ತಿದ್ದಾರೆ. ವಾಹನ ಮಾಲೀಕರಿಗೆ ಇವರೇ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಹೆಚ್. ಆಶ್ವತ್ಥ ರೆಡ್ಡಿ:- ಆ ತರಹ ಮಾಡುತ್ತಿದ್ದರೆ ಕಾನೂನು ಬಾಹಿರ. ಆದ್ದರಿಂದ ಅದನ್ನು ನಿಲ್ಲಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಹೂಳೆತ್ತುವ ಕಾರ್ಯಕ್ಕಾಗಿ ವಿಶ್ವ ಬ್ಯಾಂಕಿನ ನೆರವು

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವಿಶ್ವ ಬ್ಯಾಂಕ್‌ನಿಂದ ರಾಜ್ಯದ ಕೆರೆಗಳಲ್ಲಿ ಹೂಳೆತ್ತಲು ಹಣ ಸಂದಾಯ ದೊರೆಯಲಿದೆಯೆ?

ಆ) ಹಾಗಿದ್ದಲ್ಲಿ ಎಷ್ಟು ಹಣ ದೊರೆಯುವುದು?

ಇ) ಹಾಗೆ ದೊರೆಯದಿದ್ದ ಪಕ್ಷದಲ್ಲಿ ರಾಜ್ಯ ಸರ್ಕಾರದವರೇ ಆ ಕೆರೆಗಳಲ್ಲಿ ಹೂಳೆತ್ತಲು ಹಾಕಿಕೊಂಡಿರುವ ಕಾರ್ಯ ಕ್ರಮಗಳೇನು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು):-

ಅ) ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಪ್ರಸ್ತಾವನೆಯ ಬಗ್ಗೆ ತೆಗೆದುಕೊಳ್ಳುವ ಅಂತಿಮ ನಿರ್ಣಯದ ನಂತರ ತಿಳಿಯಲಾಗುವುದು.

ಇ) ೧೯೯೨-೯೩ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಅಯವ್ಯಯ ಪಟ್ಟಿಯಲ್ಲಿ ೫೦ ಲಕ್ಷ ರೂ. ಗಳ ಅನುದಾನ ಒದಗಿಸಲಾಗಿದ್ದು, ಆ ಅನುದಾನಕ್ಕನುಗುಣವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.